ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ಹಾವೇರಿಯಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು 1992-93ರಲ್ಲಿ ನೀಡಿದೆ. ಇದುವರೆಪಿಗು ರೂ. 14.68 ಲಕ್ಷ ವೆಚ್ಚ ಮಾಡಿ ಕ್ರೀಡಾಂಗಣದ ಆಟದ ಮೈದಾನ ಸಮತಟ್ಟು ಮಾಡಲಾಗಿದೆ. ಸದರಿ ಕ್ರೀಡಾಂಗಣದ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣದ ಕಟ್ಟಡವನ್ನು ಪ್ರಾರಂಭಿಸಿದ್ದು ಮೇಲ್ಚಾವಣಿ ಮಟ್ಟಕ್ಕೆ ಬಂದಿದೆ. ಕಾಮಗಾರಿ ಅರ್ಧಕ್ಕೆ ನಿಂತಿದೆ. ಹಾವೇರಿ ತಾಲ್ಲೂಕು ಕೇಂದ್ರವು ಜಿಲ್ಲಾ ಕೇಂದ್ರವಾಗಿ ಅಸ್ತಿತ್ವಕ್ಕೆ ಬಂದ ಮೇಲೆ ಹಾವೇರಿ ತಾಲ್ಲೂಕು ಕ್ರೀಡಾಂಗಣವನ್ನು ಜಿಲ್ಲಾ ಕ್ರೀಡಾಂಗಣವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ನಿರ್ಧರಿಸಿದೆ.

ಇ) ಪ್ರಸ್ತುತ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ರೂ.20.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ಬೀಡಿ ಕಾರ್ಮಿಕರಿಗೆ ವಸತಿ ಸೌಲಭ್ಯ.

47(390)

ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಬೀಡಿ ಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ವಸತಿ ಸೌಲಭ್ಯ ಕಲ್ಪಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮ ಯಾವುವು?

ಇ) ಕಾರ್ಮಿಕರ ಹಾಗು ಸರ್ಕಾರದ ಮಧ್ಯೆ ಹಣದ ಒಪ್ಪಂದ ಮಾಡಿಕೊಳ್ಳುವಿರೋ ಅಥವಾ ಸಂಪೂರ್ಣ ಸರ್ಕಾರವೇ ಹೊರೆ ಹೊರುವುದೊ?

ಈ) ಈ ಯೋಜನೆ ಯಾವ ವರ್ಷದಿಂದ ಪ್ರಾರಂಭವಾಗುತ್ತದೆ?

ಉ) ಸರ್ಕಾರ ಈ ಯೋಜನೆಗೆ ಎಷ್ಟು ಹಣ ಮೀಸಲಿಟ್ಟಿರುತ್ತದೆ? ಇಲ್ಲವಾದಲ್ಲಿ

ಕಾರಣಗಳೇನು?

ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ) ಬೀಡಿ ಕಾರ್ಮಿಕರ ಕಾಯ್ದೆಯು ಕೇಂದ್ರೀಯ ಶಾಸನವಾಗಿದ್ದು, ಕೇಂದ್ರ ಸರ್ಕಾರವು ಸದರಿ ಕಾಯ್ದೆಯಡಿ ಬೀಡಿ ಕಾರ್ಮಿಕರ ಕಲ್ಯಾಣಕ್ಕಾಗಿ ''ಬೀಡಿ ಕಾರ್ಮಿಕರ ಸಮಗ್ರ ವಸತಿ ಯೋಜನೆ'' (Integarated Housing Scheme for Beedi Workers) ಯನ್ನು ರೂಪಿಸಿದ್ದು ಸದರಿ ಯೋಜನೆಯನ್ನು ರಾಜ್ಯ ಸರ್ಕಾರವು ಅನುಷ್ಠಾನ ಮಾಡುತ್ತಿದೆ. ಈ ಯೋಜನೆಯಡಿಯಲ್ಲಿ ಬೀಡಿ ಕಾರ್ಮಿಕರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿದೆ.

ಆ) ''ಅ''ನಲ್ಲಿ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ) ಕೇಂದ್ರ ಸರ್ಕಾರ ವಸತಿ ಯೋಜನೆಯಡಿಯಲ್ಲಿ ಪ್ರತಿ ಬೀಡಿ ಫಲಾನುಭವಿಗಳಿಗೆ ಕೇಂದ್ರ ಸರ್ಕಾರವು ರೂ.20,000 ಸಹಾಯಧನ (subsidy) ಒದಗಿಸಲಿದ್ದು, ಮನೆ ಕಟ್ಟಲು ತಗುಲುವ ಉಳಿದ ಹಣವನ್ನು ಸಾಲದ ರೂಪದಲ್ಲಿ ಪಡೆಯಬೇಕಾಗುತ್ತದೆ. ಸದರಿ ಸಾಲವನ್ನು ಬೀಡಿ ಕಾರ್ಮಿಕರೇ ಭರಿಸಬೇಕಾಗುತ್ತದೆ. ಸರ್ಕಾರವು ಈ ಸಾಲವನ್ನು ಹೊರುವುದಿಲ್ಲ. ವಸತಿ ನಿರ್ಮಿಸುವ ಏಜೆನ್ಸಿ ಹಾಗೂ ಕಾರ್ಮಿಕರ ನಡುವೆ ಸಾಲ ಪಡೆಯುವ ಹಾಗೂ ಸಾಲ ಮರುಪಾವತಿ ಮಾಡುವ ಕುರಿತು ಒಪ್ಪಂದವಾಗಿರುತ್ತದೆ.

ಈ) ಬೀಡಿ ಕಾರ್ಮಿಕರಿಗೆ ವಸತಿ ಕಲ್ಪಿಸುವ ಕೇಂದ್ರ ಸರ್ಕಾರದ ಬೀಡಿ ಕಾರ್ಮಿಕರ ಸಮಗ್ರ ವಸತಿ ಯೋಜನೆಯು "(INTEGARTED HOUSING SCHEME FOR BEEDI WORKERS) ದಿನಾಂಕ: 14-06-1999 ರಂದು ಪ್ರಾರಂಭವಾಗಿರುತ್ತದೆ.

ಉ) ಬೀಡಿ ಕಾರ್ಮಿಕರಿಗೆ ವಸತಿ ಕಲ್ಪಿಸುವ ಯೋಜನೆಯನ್ನು ಕೇಂದ್ರ ಸರ್ಕಾರವೇ ರೂಪಿಸಿದ್ದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಯೋಜನೆಯನ್ನು ಅನುಷ್ಠಾನ ಮಾಡುತ್ತಿರುವುದರಿಂದ ರಾಜ್ಯ ಸರ್ಕಾರವು ಪ್ರತ್ಯೇಕವಾದ ಯೋಜನೆಗಳನ್ನು ಹಾಕಿಕೊಂಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಹಣ ಮೀಸಲಿಟ್ಟಿರುವುದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡಾಂಗಣ ನಿರ್ಮಾಣ.